ಓ.ಎಸ್. ನಂ.75/2019 ರಲ್ಲಿ
ಪಿ.ಡಬ್ಲ್ಯೂ-1(ಸಿ.ಮಂಜುನಾಥ್)

ದಿನಾಂಕ 04.11.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಹೆಚ್.ವಿ.ಎಂ., ವಕೀಲರಿಂದಃ-

ಪ್ರತಿವಾದಿ ನನಗೆ ಸುಮಾರು 20 ವರ್ಷಗಳಿಂದ ಪರಿಚಯ. ಪ್ರತಿವಾದಿ ಮತ್ತು ಅವರ ಗಂಡ ನಮಗೆ ಸಂಬಂಧಿಕರು. ದಾವಾ ಸ್ವತ್ತನ್ನು ಪ್ರತಿವಾದಿಗೆ ಕೊಡಿಸಿದ್ದು ನನ್ನ ತಂದೆಯೇ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಾಖಲಾತಿಗಳ ಬಗ್ಗೆ ನಿಮಗೆ ಚೆನ್ನಾಗಿ ಗೊತ್ತಿತ್ತು ಎಂದರೆ ಸಾಕ್ಷಿಯು ಸರ್ವೇ ನಂಬರ್ ಮಾತ್ರ ಗೊತ್ತಿತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪಹಣಿಯನ್ನು ನಾನು ನೋಡಿದ್ದೇನೆ, ಬೇರೆನೂ ದಾಖಲೆಯನ್ನು ನಾನು ನೋಡಿಲ್ಲ. ಅಗ್ರಿಮೆಂಟ್ ಮಾಡುವ ಮುಂಚೆ ಪಹಣಿಯನ್ನು ಮಾತ್ರ ನೋಡಿದ್ದೆ.

2. ನಿಪಿ-1ರ ಸ್ಟ್ಯಾಂಪ್ ಪೇಪರನ್ನು ಬಿಡದಿಯಲ್ಲಿ ತಂದದ್ದು. ನಿಪಿ-1ರ ಸ್ಟ್ಯಾಂಪ್ ಪೇಪರ್ ತಂದ ಅಂಗಡಿಯ ವಿಳಾಸ ಏನು ಎಂದರೆ ಸಾಕ್ಷಿಯು ಸ್ಟ್ಯಾಂಪ್ ವೆಂಡಾರ್ ತಂದು ಕೊಟ್ಟರು ಎಂದು ನುಡಿಯುತ್ತಾರೆ. ನಿಪಿ-1ರ ಸ್ಟ್ಯಾಂಪ್ ಪೇಪರನ್ನು ಖರೀದಿ ಮಾಡಿದ ದಿನಾಂಕವನ್ನು ಮರೆತಿದ್ದೇನೆ. ಸ್ಟ್ಯಾಂಪ್ ಪೇಪರ್ ಖರೀದಿ ಮಾಡಿದ ಸಮಯ ಎಷ್ಟು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ್ಟ್ಯಾಂಪ್ ಪೇಪರ್ ಖರೀದಿ ಮಾಡಲು ಹಣ ಪಾವತಿಸಿದ್ದು ನಾವೇ. ಸ್ಟ್ಯಾಂಪ್ ಪೇಪರ್‌ನಲ್ಲಿ ಫರ್ಸ್ಟ್ ಪಾರ್ಟಿ ನನ್ನ ಹೆಸರು, ಎರಡನೇ ಪಾರ್ಟಿ ಹನುಮಕ್ಕ ಎಂದು ತೋರಿಸಿದೆ. ನಿಪಿ-1ರ ಸ್ಟ್ಯಾಂಪ್ ಪೇಪರ್ ಹಣ ಕೊಟ್ಟು ಖರೀದಿ ಮಾಡಿದವರು ಯಾರು ಎಂದರೆ ಸ್ಟ್ಯಾಂಪ್ ವೆಂಡಾರ್‌ಗೆ ಸ್ಟ್ಯಾಂಪ್ ಪೇಪರ್ ತೆಗೆದುಕೊಂಡು ಬನ್ನಿ ಎಂದು

ಹೇಳಿದ್ದೆವು ಎಂದು ನುಡಿಯುತ್ತಾರೆ. ಸ್ಟ್ಯಾಂಪ್ ಪೇಪರನ್ನು ನನ್ನ ಹೆಸರಿನಲ್ಲೇ ಖರೀದಿ ಮಾಡಲಾಗಿದೆ. ಸ್ಟ್ಯಾಂಪ್ ಪೇಪರ್‌ನ ಮೌಲ್ಯ ಎಷ್ಟು ಎಂದರೆ ಸಾಕ್ಷಿಯು ಸ್ಟ್ಯಾಂಪ್ ವೆಂಡಾರ್‌ರವರು ಸ್ಟ್ಯಾಂಪ್ ಪೇಪರ್‌ನ ಮೌಲ್ಯ ಮತ್ತು ಅವರ ಬರೆದುಕೊಡುವ ಶುಲ್ಕ ಸಮೇತ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ.

3. ನಿಪಿ-1 ನ್ನು ರಾಮನಗರದ ಸ್ಟ್ಯಾಂಪ್ ವೆಂಡಾರ್ ಸಿದ್ದರಾಜುರವರ ಬಳಿ ಟೈಪ್ ಮಾಡಿಸಲಾಯಿತು. ಟೈಪ್ ಮಾಡಿಸಿದಾಗ ಸಮಯ ಮಧ್ಯಾಹ್ನ. ನಿಪಿ-1 ನ್ನು ಟೈಪ್ ಮಾಡಿಸಿದ್ದು 4 ನೇ ತಿಂಗಳು 2016 ರಲ್ಲಿ. ತಾರೀಖು ಹೇಳಲು ಬರುವುದಿಲ್ಲ. ಸ್ಟ್ಯಾಂಪ್ ಪೇಪರ್ ಖರೀದಿ ಮಾಡಿಸಿದ ದಿವಸವೇ ಟೈಪ್ ಮಾಡಲಾಯಿತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ನ್ನು ಟೈಪ್ ಮಾಡಿಸಲು ಮಾಹಿತಿ ಕೊಟ್ಟದ್ದು ಯಾರು ಎಂದರೆ ಸಾಕ್ಷಿಯು ಅಂಗಡಿಯವರು ಕೊಟ್ಟರು ನಾವು ಅವರ ಜೊತೆ ಕುಳಿತು ಮಾತನಾಡಿದೆವು ಎಂದು ನುಡಿಯುತ್ತಾರೆ.

4. ನಿಪಿ-1 ನ್ನು ತಯಾರು ಮಾಡಲು ದಾಖಲೆ ಕೊಟ್ಟದ್ದು ಪ್ರತಿವಾದಿ ಮತ್ತು ಅವರ ಗಂಡ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಸಂಪೂರ್ಣವಾಗಿ ಹೇಳಲಿಕ್ಕಾಗಲ್ಲ. ಸ್ವತ್ತಿನ ಸ್ವಾಧೀನವನ್ನು ಕೊಟ್ಟ ಬಗ್ಗೆ ನಿಪಿ-1 ರಲ್ಲಿ ಬರೆದಿಲ್ಲ. ಸ್ವತ್ತಿನ ಸ್ವಾಧೀನ ಯಾರ ಬಳಿ ಇದೆ ಎಂದು ನಿಪಿ-1 ರಲ್ಲಿ ಬರೆದಿದೆಯಾ ಎಂದರೆ ಬರೆದಿಲ್ಲ. ಸ್ವತ್ತಿನ ಸ್ವಾಧೀನ ಪ್ರತಿವಾದಿಯ ಬಳಿ ಇದೆ. ನಿಪಿ-1 ಅಗ್ರಿಮೆಂಟ್ 4 ಪುಟಗಳಿವೆ. ನಿಪಿ-1 ರ ಪುಟ 1 ರಿಂದ 3 ರಲ್ಲಿ ಮಾರಾಟಗಾರರು ಮತ್ತು ಖರೀದಿದಾರರ

ಸಹಿಗಳಿಲ್ಲ ಎಂದರೆ ಸರಿ. ನಿಪಿ-1ರ 4ನೇ ಪುಟದಲ್ಲಿರುವ ಹನುಮಕ್ಕ ಎಂಬ ಸಹಿ ಪ್ರತಿವಾದಿಯ ಸಹ ಅಲ್ಲ ಎಂದರೆ ಸರಿಯಲ್ಲ. ಸದರಿ ಸಹಿಯನ್ನು ನಾನು ಫೋರ್ಜರಿ ಮಾಡಿದ್ದೇನೆ ಎಂದರೆ ಸರಿಯಲ್ಲ.

5. ಸ್ವತ್ತಿನ ವ್ಯಾಪಾರ ಯಾವ ದಿನ ಆಯಿತು ಎಂದರೆ ಸಾಕ್ಷಿಯು ನಿಪಿ-1ರ ದಿನಾಂಕದ ಒಂದು ವಾರ ಅಥವಾ 10 ದಿವಸದ ಮುಂಚೆ ಮಾತುಕತೆ ಮಾಡಿದೆವು ಎಂದು ನುಡಿಯುತ್ತಾರೆ. ಪ್ರತಿವಾದಿ ನಿಪಿ-1ರ ವ್ಯವಹಾರ ಮಾಡಿಲ್ಲ, ಸ್ವತ್ತನ್ನು ಮಾರಾಟ ಮಾಡುತ್ತೇನೆ ಎಂದು ಅವರು ಒಪ್ಪಿಲ್ಲ ಎಂದರೆ ಸರಿಯಲ್ಲ. ನಿಪಿ-1 ನಾನು ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ-1ರಲ್ಲಿ ಸಾಕ್ಷಿದಾರರ ಸಹಿ ಬಿಟ್ಟರೇ ಅವರ ಹೆಸರು, ತಂದೆಯ ಹೆಸರು, ವಿಳಾಸ ಇಲ್ಲ ಎಂದರೆ ಸಾಕ್ಷಿಯು ಹೌದು ಇಲ್ಲ, ಅವರು ಮೂರು ತಿಂಗಳಲ್ಲಿ ರಿಜಿಸ್ಟರ್ ಮಾಡಿಕೊಡುತ್ತೇವೆ ಎಂದು ಹೇಳಿದ್ದರು, ಸಂಬಂಧಿಕರೆಂದು ರಿಜಿಸ್ಟರ್ ಪತ್ರವೇ ಬೇಡವೆಂದು ಹೇಳಿದ್ದೆವು ಎಂದು ನುಡಿಯುತ್ತಾರೆ. ನಿಪಿ-1ರ ಸಾಕ್ಷಿದಾರರ ಹೆಸರು ದಾಸಪ್ಪ, ಎರಡನೇ ಸಾಕ್ಷಿ ಅವರ ಸ್ನೇಹಿತರು ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1ರ ಸಾಕ್ಷಿದಾರರನ್ನು ಸಹ ನಾನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

6. ನಿಪಿ-1 ಕರಾರು ಪತ್ರ ಆದ 2 ತಿಂಗಳೊಳಗೆ ಕ್ರಯಪತ್ರ ಬರೆದುಕೊಡಿ ಎಂದು ಪ್ರತಿವಾದಿಗೆ ನೋಟಿಸ್ ಕೊಟ್ಟಿಲ್ಲ, ಆದರೆ ಕೇಳಿದ್ದೇ. ಕೇಳಿದಾಗ ಒಂದುಮುಕ್ಕಾಲು ಗುಂಟೆಗೆ ಪುರಸಭೆ ದಾಖಲೆ ಕೊಟ್ಟರು, ರೆವಿನ್ಯೂ ದಾಖಲೆ ಕೊಡಲಿಲ್ಲ ಎಂದು ನುಡಿಯುತ್ತಾರೆ. 2 ತಿಂಗಳ ಒಳಗೆ ನೋಟಿಸ್ ಕೊಡಲು ತೊಂದರೆ ಇರಲಿಲ್ಲ ಎಂದರೆ

ಸಾಕ್ಷಿಯು ಸಂಬಂಧಿಕರೆಂದು ಕೊಡಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಪ್ರತಿವಾದಿಯ ಗಂಡನ ಬಳಿ 2015 ರಲ್ಲಿ 10 ಲಕ್ಷ ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ 10 ಲಕ್ಷ ಸಾಲ ಪಡೆದುಕೊಂಡಿದ್ದು 2016 ರಲ್ಲಿ ಪ್ರತಿವಾದಿಯ ಗಂಡನಿಗೆ ವಾಪಸ್ಸು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ದಿನಾಂಕ 04.04.2016 ರಲ್ಲಿ ಪ್ರತಿವಾದಿಯ ಗಂಡನಿಗೆ ಚೆಕ್ ಮುಖಾಂತರ 10 ಲಕ್ಷ ಕೊಟ್ಟರು ಎಂದರೆ ಸರಿಯಲ್ಲ. ಆ ಚೆಕ್ ನಂಬರನ್ನು ನಿಪಿ-1 ರಲ್ಲಿ ನಮೂದು ಮಾಡಿ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಸ್ವತ್ತು ಈಗ ಒಂದು ಕೋಟಿಗೂ ಜಾಸ್ತಿ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಸ್ವತ್ತಿನ ಮೌಲ್ಯ 32 ಲಕ್ಷ ಎಂದು ನಿಪಿ-1 ರಲ್ಲಿ ತೋರಿಸಿದೆ. 32 ಲಕ್ಷ ರೂಪಾಯಿಗೆ ನ್ಯಾಯಾಲಯದ ಶುಲ್ಕವನ್ನು ಕಟ್ಟಿದ್ದೇನೆ. 32 ಲಕ್ಷ ರೂಪಾಯಿಗೆ ನ್ಯಾಯಾಲಯದ ಶುಲ್ಕ ಪಾವತಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಶುಲ್ಕವನ್ನು 15,16,970/- ರೂಪಾಯಿಗೆ ಮಾತ್ರ ಪಾವತಿಸಿದ್ದೀರಿ ಎಂದರೆ ಸಾಕ್ಷಿಯು ಪೂರ್ತಿ ಹಣಕ್ಕೆ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ಶುಲ್ಕ ಸಂಪೂರ್ಣ ಪಾವತಿಸಿಲ್ಲ, ನಿಪಿ-1 ರ ಸ್ಟ್ಯಾಂಪ್ ಶುಲ್ಕ ಮತ್ತು ದಂಡ ಸೇರಿಸಿ ಪಾವತಿಸಿರುವುದು ಎಂದರೆ ಸರಿಯಲ್ಲ. ನನ್ನ ಅನುಕೂಲಕ್ಕೆ ತಕ್ಕಂತೆ ನೋಟಿಸ್ ಕೊಟ್ಟು ಅನುಕೂಲಕ್ಕೆ ತಕ್ಕಂತೆ ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಯಾವುದೇ ಕರಾರನ್ನು ನನಗೆ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿದ್ದೇನೆ

ಎಂದರೆ ಸರಿಯಲ್ಲ. ಪ್ರತಿವಾದಿ ಕ್ರಯಪತ್ರ ಬರೆದುಕೊಡಲು ಬಾಧ್ಯರಲ್ಲ, ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೂ ಸಹ ನಾವು ಕಳುಹಿಸಿದ ನೋಟಿಸ್‌ಗೆ ರಿಪ್ಲೈ ಕಳುಹಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆಯೇ ಹಣ ಪಡೆದುಕೊಂಡಿದ್ದರು ಎಂದು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.